# ಕರ್ನಾಟಕ ವಿಧಾನ ಪರಿಷತ್ತು.

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 864(937) |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.12.2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೆ.ಟಿ.ಸಿ.ಪಿ ಕಾಯ್ದೆ 2015 ಕಲಂ 17ನ್ನು ಯಾವಾಗ ತಿದ್ದುಪಡಿ ಮಾಡಲಾಯಿತು; ಹಾಗೂ ಪರಿಷ್ಕೃತ ನಿಯಮಗಳ ಅಧಿಸೂಚನೆಯನ್ನು ಯಾವ ವರ್ಷದಲ್ಲಿ ಅಂತಿಮಗೊಳಿಸಲಾಗಿದೆ. | • ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ:24: ಶಾಸನ 2015 ಬೆಂಗಳೂರು ದಿನಾಂಕ:10.09.2015 ರಂದು ಹೊರಡಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17ಕ್ಕೆ ತಿದ್ವಪಡಿ ಮಾಡಲಾಗಿರುತ್ತದೆ.<br><br>• ಸದರಿ ತಿದ್ದುಪಡಿ ಕಾಯ್ದೆಯಡಿಯಲ್ಲಿ ವಿನ್ಯಾಸಗಳಲ್ಲಿ ಕಾಯ್ದಿರಿಸಬೇಕಾದ ಉದ್ಯಾನವನ ಮತ್ತು ನಾಗರೀಕ ಸೌಲಭ್ಯಕ್ಕೆ ಕನಿಷ್ಟ ವಿಸ್ತೀರ್ಣವನ್ನು ನಿಯಮಗಳಲ್ಲಿ ನಿಗಧಿಪಡಿಸಲು ಹಾಗೂ ವಿನ್ಯಾಸಗಳಿಗೆ ತಾತ್ಕಾಲಿಕ ಅನುಮೋದನೆ ನೀಡಿ ವಿನ್ಯಾಸವು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರ ಅಂತಿಮ ವಿನ್ಯಾಸಕ್ಕೆ ಅನುಮೋದನೆ ನೀಡಲು ಮತ್ತು (ಶೇ:100) ನಿವೇಶನಗಳನ್ನು ಬಿಡುಗಡೆ ಮಾಡಲು ಕಾಯ್ದೆಯಲ್ಲಿ ನಿಗಧಿಪಡಿಸಲಾಗಿರುತ್ತದೆ.<br><br>• 2015 ರ ತಿದ್ದುಪಡಿ ಕಾಯ್ದೆಗೆ ಅನುಗುಣವಾಗಿ ಸರ್ಕಾರದ ಅಧಿಸೂಚನೆ ಸಂ.UDD 25 TTP 2016, ದಿನಾಂಕ: 06.07.2017 ರ ಕಲಂ 17 ಗೆ ಕರಡು ನಿಯಮಗಳನ್ನು ಸರ್ಕಾರದರಿಂದ ಹೊರಡಿಸಲಾಗಿರುತ್ತದೆ.<br><br>• ನಂತರ ದಿನಾಂಕ:19.10.2020 ರಂದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 17ಕ್ಕೆ ತಿದ್ದುಪಡಿ |

| | | |
|---|---|---|
| | | ಬಿಡುಗಡೆಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>• ಈ ಮಧ್ಯೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 36 ಶಾಸನ 2021, ದಿನಾಂಕ:07.10.2021 ರಂದು ಪುನ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 17ಕ್ಕೆ ತಿದ್ದುಪಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. (ಉಪ ಪ್ರಕರಣ 2-C, 2-B, & 2-E) ಕುರಿತಂತೆ ತಿದ್ದುಪಡಿ ಮಾಡಲಾಗಿರುತ್ತದೆ<br><br>• ಸದರಿ ತಿದ್ದುಪಡಿಯಲ್ಲಿ ವಿನ್ಯಾಸವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರ ಅಂತಿಮ ವಿನ್ಯಾಸ ಅನುಮೋದನೆ ನೀಡುವುದರೊಂದಿಗೆ ಎರಡು ಹಂತದಲ್ಲಿ ವಿನ್ಯಾಸದ ನಿವೇಶನಗಳನ್ನು ಬಿಡುಗಡೆ ಮಾಡಲು ಕಾಯ್ದೆಯಲ್ಲಿ ನಿಗಧಿಪಡಿಸಲಾಗಿರುತ್ತದೆ. ಎರಡು ಹಂತಗಳಲ್ಲಿ ಬಿಡುಗಡೆ ಮಾಡುವ ಪ್ರಕರಣಗಳಲ್ಲಿ ಎಲ್ಲಾ ಮೂಲೆ ನಿವೇಶನಗಳನ್ನು mortgage ಮಾಡಿಕೊಂಡು ಮೊದಲನೇಯ ಹಂತದ ಶೇ 40% ನಿವೇಶನಗಳನ್ನು ಬಿಡುಗಡೆ ಮಾಡಲು ಹಾಗೂ ವಿನ್ಯಾಸದ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಮುಕ್ತಾಗೊಳಿಸಿದ ನಂತರ ಶೇ 60% ನಿವೇಶನಗಳನ್ನು ಬಿಡುಗಡೆಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>• ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2021ರ ಕಲಂ 17ಕ್ಕೆ ಸಂಬಂಧಿಸಿದಂತೆ ಪೂರಕ ನಿಯಮಗಳನ್ನು ಈಗಾಗಲೇ ರಚಿಸಲಾಗಿದೆ ಸದರಿ ಕರಡು ನಿಯಮಗಳ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿದ್ದು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಪರಿಶೋಧನೆಗೆ ಸಲ್ಲಿಸಲಾಗಿರುತ್ತದೆ. ಪರಿಶೋಧಿಸಿದ ನಂತರ ನಿಯಮಾನುಸಾರ ಕ್ರಮವಹಿಸಲಾಗುವುದು. |
| ಆ) | ರಾಜ್ಯದ ಯೋಜನಾ ಪ್ರಾಧಿಕಾರಗಳು, ಪೌರ ಸಂಸ್ಥೆಗಳು/ಗ್ರಾಮ ಪಂಚಾಯಿತಿಗಳು ಸ್ಥಳೀಯ ಯೋಜನಾ ಪ್ರದೇಶದಲ್ಲಿ ತಮಗೆ ತೋಚಿದ ರೀತಿ ವಿನ್ಯಾಸಗಳನ್ನು ಅನುಮೋದಿಸುತ್ತಿರುವುದು ಸರ್ಕಾರದ | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ರಂತೆ ಹಾಗೂ ಕಲಂ 4-K ರಡಿಯಲ್ಲಿ ವಿನ್ಯಾಸಕ್ಕೆ ಅನುಮೋದನೆ ನೀಡಬೇಕಾಗಿರುತ್ತದೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ: 28.08.2024 |

| | | |
|---|---|---|
| | ಗಮನಕ್ಕೆ ಬಂದಿದೆಯೇ. | ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಅನ್ನು ಉಲ್ಲಂಘಿಸಿ ಗ್ರಾಮ ಪಂಚಾಯತಿಗಳಿಂದ / ಸ್ಥಳೀಯ ಸಂಸ್ಥೆಗಳಿಂದ ವಿನ್ಯಾಸ ಅನುಮೋದಿಸುತ್ತಿರುವುದನ್ನು ತಡೆಗಟ್ಟುವ ಕುರಿತಂತೆ ಸುತ್ತೋಲೆಯನ್ನು ಹೊರಡಿಸಲಾಗಿದ್ದು , ಸದರಿ ಸುತ್ತೋಲೆಯಲ್ಲಿನ ನಿರ್ದೇಶನಗಳನ್ವಯ ವಿನ್ಯಾಸ ನಕ್ಷೆಗಳನ್ನು ಅನುಮೋದಿಸಲಾಗುತ್ತಿವೆ |
| ಇ) | ಬಂದಿದ್ದಲ್ಲಿ ಈ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು: ಹಾಗೂ ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳಾವುವು?(ವಿವರ ನೀಡುವುದು) | |
| ಈ. | ಕೆ.ಟಿ.ಸಿ.ಪಿ ಕಾಯ್ದೆ 2015 ಕಲಂ 17 ಕ್ಕೆ ಪರಿಷ್ಕೃತ ನಿಯಮಗಳನ್ನು ಅಧಿಸೂಚಿಸದೇ ವಿಳಂಬ ನೀತಿ ಅನುಸರಿಸುತ್ತಿರುವುದಕ್ಕೆ ಕಾರಣಗಳೇನು ಮತ್ತು ಯಾವ ಕಾಲಮಿತಿಯಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು? (ಸಂಪೂರ್ಣ ವಿವರ ನೀಡುವುದು). | ಮೇಲೆ ತಿಳಿಸಿರುವ ಕ್ರಮ ಸಂಖ್ಯೆ:ಅ ರಲ್ಲಿ ವಿವರಿಸಿರುವಂತೆ 2015 ರಿಂದ 2021 ರವರೆಗೆ ಕಾಯ್ದೆಗೆ ಹಲವು ಬಾರಿ ತಿದ್ದುಪಡಿ ಮಾಡಲಾಗಿದ್ದು ಚಾಲ್ತಿ ಕಾಯ್ದೆಯ ಅವಕಾಶದಂತೆ ನಿಯಮಗಳನ್ನು ರಚಿಸಲಾಗಿದ್ದು ಸಕ್ಷಮ ಪ್ರಾಧಿಕಾರಗಳ ಅಭಿಪ್ರಾಯ/ಪರಿಶೋಧನೆಯ ನಂತರ ಸದರಿ ನಿಯಮಗಳನ್ನು ಹೊರಡಿಸಲು ಕ್ರಮಕೈಗೊಳ್ಳಲಾಗುವುದು. |

ಕಡತ ಸಂಖ್ಯೆ: ನಅಇ 68 ಎಲ್ ಸಿ ಕ್ಯೂ 2024 (ಇ-ಕಡತ)

**(ಬಿ.ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು